# ಸಂವಿಧಾನ ಚರ್ಚೆ ವೇಳೆ ಅಸ್ಪೃಶ್ಯತೆಯ ಮಂಥನ

## ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ ಎಂದು ಕೆಲ ಸದಸ್ಯರ ವಾದ । ಈಗ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ ಎಂದ ಕೆಲ ಸದಸ್ಯರು ಜಾತಿ ವ್ಯವಸ್ಥೆ ಎಲ್ಲಿಯವರೆಗೆ ಇರಲಿದೆಯೋ ಅಲ್ಲಿಯವರೆಗೆ ಮೀಸಲಾತಿ ಇರಬೇಕು ಎಂದಿದ್ದಾರೆ ಎಂದ ಸಿದ್ದರಾಮಯ್ಯ

**ಕನ್ನಡಪ್ರಭ ವಾರ್ತೆ** ವಿಧಾನಸಭೆ

ಅಸ್ಪೃಶ್ಯತೆ ಆಚರಣೆ ಕುರಿತು ಶುಕ್ರವಾರ ಸದನದಲ್ಲಿ ಗಂಭೀರವಾಗಿ ಚರ್ಚೆ ನಡೆದು, ಕೆಲವರು ಅಸ್ಪೃಶ್ಯತೆ ಈಗಲೂ ಹೆಚ್ಚಿನ ಪ್ರಮಾಣದಲ್ಲಿ ಜೀವಂತವಾಗಿದೆ ಎಂದು ವಾದಿಸಿದರೆ ಇನ್ನು ಕೆಲವರು ಈಗ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ ಎಂದು ಪ್ರತಿಪಾದಿಸಿದ ಪ್ರಸಂಗ ನಡೆಯಿತು.

ಶುಕ್ರವಾರ ಸಂವಿಧಾನ ವಿಷಯದ ಮೇಲಿನ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಎಸ್‌ಪಿ ಸದಸ್ಯ ಎನ್.ಮಹೇಶ್, ಅಸ್ಪೃಶ್ಯತೆ ಕಾನೂನು ಬಾಹಿರವಾಗಿದ್ದರೂ ರಾಜ್ಯದ ಶೇ.70ರಷ್ಟು ಗ್ರಾಮೀಣ ಭಾಗದಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಈವರೆಗೂ ಜೀವಂತವಾಗಿದೆ. ಪರಿಶಿಷ್ಟ ವರ್ಗದವರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ ಎಂದು ಹೇಳಿದರು.

ಮಹೇಶ್ ಅವರ ಮಾತನ್ನೇ ಆಧರಿಸಿ ಮಾತನಾಡಿದ ಜೆಡಿಎಸ್ ಸದಸ್ಯ ಶ್ರೀನಿವಾಸಗೌಡ, ತಾವು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವೇಳೆ ದಲಿತ ಮಿತ್ರನ ಮನೆಯಲ್ಲಿ ಊಟದ ಮಾಡಿದ ಬಳಿಕ ನಡೆದ ಘಟನೆಯನ್ನು ಪ್ರಸ್ತಾಪಿಸಿ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವುದು ನಾವೆಲ್ಲಾ ತಲೆತಗ್ಗಿಸುವ ವಿಚಾರ ಎಂದು ಹೇಳಿದರು.

ಕಾಂಗ್ರೆಸ್ ಸದಸ್ಯ ಜೆ.ಎನ್.ಗಣೇಶ್ ಮಾತನಾಡಿ, ಗ್ರಾಮೀಣ ಭಾಗದ ಹಲವು ಹೋಟೆಲ್‌ಗಳಲ್ಲಿ ಪರಿಶಿಷ್ಟ ಜಾತಿ, ಪಂಗಡದವರಿಗೆ ಪ್ರತ್ಯೇಕ ಗ್ಲಾಸ್ ಇಟ್ಟಿರುವುದು ಹಾಗೂ ಮೇಲಿಂದ ನೀರು ಹಾಕುವ ಪದ್ಧತಿ ಇದೆ ಎಂದು ಪ್ರಸ್ತಾಪಿಸಿದರು.

ಮಧ್ಯಪ್ರವೇಶಿಸಿ ಮಾತನಾಡಿದ ಜೆಡಿಎಸ್ ಸದಸ್ಯ ಶಿವಲಿಂಗೇಗೌಡ, ನಮ್ಮಲ್ಲಿ ಎಲ್ಲಿಯೂ ಇಂತಹ ಪದ್ಧತಿ ಇಲ್ಲ. ಅದೆಲ್ಲಾ ದೂರವಾಗಿದೆ ಎಂದರು. ತಕ್ಷಣ ಜೆಡಿಎಸ್ ಸದಸ್ಯ ಅನ್ನದಾನಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ತಮ್ಮ ಪುತ್ರನೊಂದಿಗೆ ನಡೆದ ಘಟನೆಯನ್ನು ಪ್ರಸ್ತಾಪಿಸಿದರು. ಸಪ್ತಗಿರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ನನ್ನ



ಮಗನ ಗೆಳತಿಯೊಬ್ಬಳು ಪ್ರತಿನಿತ್ಯ ಜತೆಯಲ್ಲಿಯೇ ಕಾಫಿ, ತಿಂಡಿ ಸೇವಿಸುತ್ತಿದ್ದರು. ಒಮ್ಮೆ ಜಾತಿಯನ್ನು ಕೇಳಿದ್ದು, ಮಗ ಯಾವುದೇ ಮುಜುಗರ ಇಲ್ಲದೆ ಪರಿಶಿಷ್ಟ ಜಾತಿ ಎಂದು ಹೇಳಿದ್ದಾನೆ. ಮರುದಿನದಿಂದಲೇ ಆಕೆ ಮಗನ ಜತೆ ಅಂತರ ಕಾಯ್ದುಕೊಳ್ಳಲಾರಂಭಿಸಿದಳು. ಹೀಗಾಗಿ ಗಣೇಶ್ ಹೇಳುತ್ತಿರುವುದು ಸುಳ್ಳಲ್ಲ ಎಂದು ಹೇಳಿದರು.

ಜೆಡಿಎಸ್ ಸದಸ್ಯ ಜಿ.ಟಿ.ದೇವೇಗೌಡ ಮಾತನಾಡಿ, ಸಮಾಜದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದರೂ ಅಲ್ಲೊಂದು, ಇಲ್ಲೊಂದು ಪ್ರಕರಣಗಳು ನಡೆಯುತ್ತಿವೆ. ಅದನ್ನು ಸರಿಪಡಿಸಬೇಕಾಗಿದೆ. ಅಸ್ಪೃಶ್ಯತೆ ನಿವಾರಣೆಗೆ ಕಾನೂನು ಇದೆ. ಘಟನೆಗಳ ನಡೆದರೆ ಸೂಕ್ತ ಕ್ರಮ ಜರುಗಿಸಬೇಕು ಎಂದರು. ಬಳಿಕ ಮಹೇಶ್ ಅವರು ಮಾತನಾಡಿ, ಸಮಾಜದಲ್ಲಿ ಬದಲಾವಣೆಯಾಗಿಲ್ಲ ಎಂದು ಹೇಳುತ್ತಿಲ್ಲ. ಬದಲಾವಣೆಯಾಗಿದರೂ ಅಸ್ಪೃಶ್ಯತೆ ಜೀವಂತವಾಗಿದೆ. ರಾಜಕೀಯವಾಗಿ ಸಮಾನತೆಯನ್ನು ಕಾಣಬಹುದು. ಆದರೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಮಾನತೆ ಬಂದಿಲ್ಲ. ಮೀಸಲಾತಿ ಎಲ್ಲಿಯವರೆಗೆ ಕೊಡಬೇಕು ಎಂಬ ಚರ್ಚೆಗಳು ಸಹ ಆರಂಭಗೊಂಡಿವೆ ಎಂದರು.

ಈ ವೇಳೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು 10 ವರ್ಷ ಮೀಸಲಾತಿ ಇಟ್ಟಿದ್ದು, ಅಷ್ಟರಲ್ಲಿ ಬದಲಾವಣೆಯಾಗಲಿದೆ ಎಂಬ ನಿರೀಕ್ಷೆಯಿಂದ ಮೀಸಲಾತಿ ಅವಧಿಯನ್ನು ನಿಗದಿಪಡಿಸಿದ್ದರು. ಆದರೆ, ಸಂವಿಧಾನದಲ್ಲಿ ಮತ್ತೊಂದನ್ನು ಹೇಳಲಾಗಿದೆ, ಜಾತಿ ಪದ್ಧತಿ ಎಲ್ಲಿಯವರೆಗೆ ಇರಲಿದೆಯೋ ಅಲ್ಲಿಯವರೆಗೆ ಮೀಸಲಾತಿ ಇರಬೇಕು ಎಂದಿದ್ದಾರೆ. ಆರ್ಥಿಕ, ಸಾಮಾಜಿಕ ಸಮಾನತೆ ಸಿಕ್ಕಾಗ ಮೀಸಲಾತಿ ಹೋಗಬಹುದು ಎಂದು ಚರ್ಚೆಗೆ ತೆರೆ ಎಳೆದರು.